ಸುಮಾರು 789 ಕೋಟಿ ಜನಸಂಖ್ಯೆಯಲ್ಲಿ, 700 ಕೋಟಿಗೂ ಹೆಚ್ಚು ಜನ ಮೊಬೈಲ್ ಫೋನ್ ಬಳಸುತ್ತಿದ್ದಾರೆ. ಈ ಅಂಕಿಅಂಶಗಳು ಇಡೀ ಜಗತ್ತು ಮೊಬೈಲ್ ಮೂಲಕ ಡಿಜಿಟಲ್ ತೆಕ್ಕೆಯೊಳಗೆ ಇರುವುದನ್ನು ಸೂಚಿಸುವಂತಿದೆ. ಡಿಜಿಟಲ್ ಭಾಷೆ ಇಂದು ವಿಶ್ವದ ಭಾಷೆಯಾಗಿದೆ.

ಸಾಮಾಜಿಕ ಸಂಬಂಧಗಳಿಗೆ ಹೊಸ ಸ್ವರೂಪ ನೀಡಿದ ಅಗ್ಗಳಿಕೆ ಇಂಟರ್ನೆಟ್‌ನದ್ದು. ಸಾಮಾಜಿಕ ಜಾಲತಾಣಗಳ ಮೂಲಕ 'ಪರ್ಯಾಯ ಸಮಾಜ' ಕೂಡ ರೂಪುಗೊಂಡಿರುವುದನ್ನು ಮಿಥ್ಯಾ ವಾಸ್ತವದಂತೆ ಕಾಣುವ ಕಟು ಸತ್ಯ. ಒಂದೆಡೆ ವೈಯಕ್ತಿಕ ಬದುಕಿನ ಸಂಬಂಧಗಳು ಶಿಥಿಲಗೊಳ್ಳುತ್ತಿದ್ದರೆ, ಇನ್ನೊಂದೆಡೆ ಡಿಜಿಟಲ್ ಸಮಾಜದಲ್ಲಿ ಸಾವಿರಾರು ಜನರೊಂದಿಗೆ ನಂಟು ಸಾಧ್ಯವಾಗುತ್ತಿರುವ ವಿರೋಧಾಭಾಸಕ್ಕೂ ವರ್ತಮಾನ ಸಾಕ್ಷಿಯಾಗಿದೆ.




## ಮನಸು ಸೈಬರ್ ಬಜಾರು!

ಬೆರಳ ತುದಿಯಲ್ಲಿ ಮಾಹಿತಿಯನ್ನು ಒದಗಿಸುವ ಅಂತರ್ಜಾಲ, ವೈಯಕ್ತಿಯ ಮಾಹಿತಿಯನ್ನು ಬಯಲಾಗಿಸುವ ವೇದಿಕೆಯೂ ಹೌದು. ವೈಯಕ್ತಿಕ ಜೀವನ ಹಾಗೂ ಗೋಪ್ಯತೆ ಎನ್ನುವುದು ಸಾಧ್ಯವೇ ಇಲ್ಲ ಎನ್ನುವ ಸ್ಥಿತಿಯನ್ನು ಸಮಾಜ ತಲುಪಿದೆ. ನಮಗೆ ಅಸ್ಪಷ್ಟವಾಗಿರುವ ನಮ್ಮ ಮನಸ್ಸನ್ನು ಡಿಜಿಟಲ್ ಪೇಟೆ ಬಹು ಸ್ಪಷ್ಟವಾಗಿ ಓದುತ್ತಿದೆ ಹಾಗೂ ಸುಪ್ತ ಮನಸ್ಸಿನೊಂದಿಗೆ ಸಂವಾದ ನಡೆಸುತ್ತಿದೆ.

ವೈಯಕ್ತಿಕ ಬದುಕಿನಲ್ಲಿ ಹಾಸುಹೊಕ್ಕಾದ ಇಂಟರ್ನೆಟ್ ಸಮಷ್ಟಿಯ ಹಿತಕ್ಕಾಗಿಯೂ ಬಳಕೆಯಾಗುತ್ತಿದೆ. ಪ್ರಾಕೃತಿಕ ವಿಕೋಪಗಳ ಸಂದರ್ಭದಲ್ಲಿ ಇಂಟರ್ನೆಟ್ ಬಳಕೆಯಿಂದಾಗಿ ಹೆಚ್ಚಿನ ಸಾವು–ನೋವು ಸಂಭವಿಸುವುದನ್ನು ತಪ್ಪಿಸಿರುವ ಉದಾಹರಣೆಗಳಿವೆ.

ನಾವೆಲ್ಲರೂ ಇಂಟರ್ನೆಟ್‌ನೊಂದಿಗೆ ಜೀವಿಸುವ ಸಂದರ್ಭಕ್ಕೆ ನಮ್ಮನ್ನು ಒಪ್ಪಿಸಿಕೊಂಡಿರುವಾಗ, ಸಹಜವಾಗಿಯೇ ಆ ಮಾಧ್ಯಮದ ಸುರಕ್ಷತೆಯ ಬಗ್ಗೆ ಯೋಚಿಸಬೇಕಾಗಿದೆ. ಇಂಟರ್ನೆಟ್ ಅಪಾರ ಸಾಧ್ಯತೆ ಮತ್ತು ಸವಲತ್ತುಗಳನ್ನು ಒಳಗೊಂಡಿರುವಂತೆಯೇ, ಅದರ ಬಳಕೆಯಲ್ಲಿ ಅಗಣಿತ ಅಪಾಯಗಳೂ ಇವೆ. ಸೈಬರ್ ವಂಚಕರು ಇಂಟರ್ನೆಟ್ ಮೂಲಕ ಹಣ ದೋಚುತ್ತಿದ್ದಾರೆ. ವಂಚನೆಯ ಸಾಧ್ಯತೆಗಳ ಬಗ್ಗೆ ಅರಿವಿದ್ದವರೇ ಗಾಳಕ್ಕೆ ಬಿದ್ದು ಹಣ ಕಳೆದುಕೊಂಡಿರುವ ಉದಾಹರಣೆಗಳೂ ಇವೆ. ಮಹಿಳೆಯರು, ಮಕ್ಕಳು ಹಾಗೂ ಹಿರಿಯ ನಾಗರಿಕರನ್ನು ಗುರಿಯಾಗಿಸಿಕೊಂಡು ಅಪರಾಧಗಳನ್ನು ಎಸಗುವವರೂ ಇದ್ದಾರೆ. ಮಹಿಳೆಯರ ಚಾರಿತ್ರ್ಯಹನನಕ್ಕೆ ತಂತ್ರಜ್ಞಾನ ಕೂಡ ಒಂದು ಸಲಕರಣೆಯಾಗಿರುವುದಕ್ಕೆ ಇಂಟರ್ನೆಟ್ ಉದಾಹರಣೆಯಂತಿದೆ. ಮಕ್ಕಳ ಶೋಷಣೆಗೂ ಅಂತರ್ಜಾಲ ವೇದಿಕೆಯಾಗಿದೆ.

ಆನ್‌ಲೈನ್ ಶಿಕ್ಷಣದ ಹೆಸರಿನಲ್ಲಿ ಮಕ್ಕಳ ಕೈಗೆ ಮೊಬೈಲ್ ಫೋನ್ ಕೊಡುವುದು ಅನಿವಾರ್ಯವಾಗಿರುವ ಸಂದರ್ಭವಿದು. ಕೊಂಚ ಎಚ್ಚರತಪ್ಪಿದರೂ ಡಿಜಿಟಲ್ ಜಗತ್ತಿನಲ್ಲಿ ಮಕ್ಕಳು ತಮ್ಮ ಬಾಲ್ಯವನ್ನು ಕಳೆದುಕೊಳ್ಳುವ ಅಪಾಯವಿದೆ. ಆ ಕಾರಣದಿಂದಲೇ ಮೊಬೈಲ್ ಬಳಕೆಯ ವಿಧಾನವನ್ನು ಮಕ್ಕಳಿಗೆ ಕಲಿಸಿಕೊಡುವ ಅವಶ್ಯಕತೆಯಿದೆ. ಏನನ್ನು ನೋಡಬೇಕು, ಯಾವುದರಿಂದ ದೂರವಿರಬೇಕು, ತೊಂದರೆಯಾದಾಗ ಏನು ಮಾಡಬೇಕು ಎನ್ನುವುದನ್ನು ಮಕ್ಕಳಿಗೆ ಕಲಿಸಿಕೊಡುವುದು ಇಂದಿನ ಅಗತ್ಯ. ದುರದೃಷ್ಟವಶಾತ್, ಮಕ್ಕಳ ಕೈಗೆ ಮೊಬೈಲ್ ಕೊಡುವ ಅನೇಕ ಹಿರಿಯರಿಗೇ ಮೊಬೈಲ್ ಬಳಕೆಯ ಸುರಕ್ಷಿತ ದಾರಿಗಳ ಕುರಿತು ಅವಜ್ಞೆಯಿರುವ ಸಂದರ್ಭ ಇಂದಿನದು.

ಅಂತರ್ಜಾಲ ಬಳಸುವವರೆಲ್ಲ ಒಂದಲ್ಲಾ ಒಂದು ಬಗೆಯಲ್ಲಿ ಸೈಬರ್ ವಂಚನೆಗೆ ಒಳಗಾಗಿಯೇ ಇರುತ್ತೇವೆ. ಈ ವಂಚನೆ ಹಣಕಾಸಿನ ರೂಪದ್ದಾಗಿರಬಹುದು, ಇಲ್ಲವೇ ಮಾಹಿತಿಯ ಕಳುವಾಗಿರಬಹುದು.

ಮೊಬೈಲ್ ಫೋನ್‌ಗಳ ಮೂಲಕ ಬ್ಯಾಂಕ್ ಖಾತೆ ನಿರ್ವಹಿಸುವ ಸವಲತ್ತು ಇರುವುದರಿಂದ, ನಮ್ಮ ಬ್ಯಾಂಕ್ ಖಾತೆಯೂ ಸದಾ ಸಕ್ರಿಯವಾಗಿರುವುದು ವಂಚಕರಿಗೆ ಪೂರಕವಾಗಿದೆ. ಕೊಂಚ ಎಚ್ಚರತಪ್ಪಿದರೂ ಬ್ಯಾಂಕ್ ಖಾತೆ ಬರಿದಾಗುವ ಅಪಾಯವಿದ್ದೇ ಇದೆ.

ಡಿಜಿಟಲ್ ಲೋಕದಿಂದ ದೂರವಿರುವುದು ಅಸಾಧ್ಯ ಎನ್ನುವಂತಹ ಸ್ಥಿತಿಯನ್ನು ನಾವು ಸೃಷ್ಟಿಸಿಕೊಂಡಿದ್ದೇವೆ. ಹಾಗಾಗಿ, ಸೈಬರ್ ಜಗತ್ತನ್ನು ಆದಷ್ಟೂ ಸುರಕ್ಷಿತವಾಗಿರುವಂತೆ ಎಚ್ಚರಿಕೆ ವಹಿಸುವುದು ಇಂದಿನ ಅಗತ್ಯ. ಅಂಥದೊಂದು ಕಾಳಜಿಯ ರೂಪದಲ್ಲಿ 'ಎಸ್‌ಐಡಿ' ಆಚರಣೆ ನಮ್ಮ ಮುಂದಿದೆ. ■

### ಸೈಬರ್ ಸುರಕ್ಷತೆಗಾಗಿ ಒಗ್ಗೂಡುವಿಕೆ

'ಉತ್ತಮ ಅಂತರ್ಜಾಲಕ್ಕಾಗಿ ಒಟ್ಟುಗೂಡೋಣ' (Together for a better internet) ಎನ್ನುವುದು ಈ ವರ್ಷದ 'ಸುರಕ್ಷಿತ ಇಂಟರ್ನೆಟ್ ದಿನ'ದ ಧ್ಯೇಯವಾಕ್ಯ.

'ಸುರಕ್ಷಿತ ಇಂಟರ್ನೆಟ್ ದಿನ'ದ ಪರಿಕಲ್ಪನೆ ಶುರುವಾದದ್ದು 2004ರಲ್ಲಿ. ಮರುವರ್ಷ, 2005ರಲ್ಲಿ 'ಎಸ್‌ಐಡಿ' ಆಚರಣೆ ತನ್ನ ವ್ಯಾಪ್ತಿಯನ್ನು ಹಿಗ್ಗಲಿಸಿಕೊಂಡಿತು. ಮೊದಲಿಗೆ ಯೂರೋಪ್‌ನಲ್ಲಿ ಆರಂಭಗೊಂಡ ಈ ಆಚರಣೆ, ಇದೀಗ ವಿಶ್ವವ್ಯಾಪಿಯಾಗಿದೆ. ಪ್ರತಿ ವರ್ಷದ ಫೆಬ್ರುವರಿ ಎರಡನೇ ವಾರದ ಎರಡನೇ ದಿನವನ್ನು 'ಸೇಫ್ ಇಂಟರ್ನೆಟ್ ದಿನ' ಎಂದು ಆಚರಿಸಲಾಗುತ್ತದೆ. ವಿಶ್ವದ ಸುಮಾರು 190 ದೇಶಗಳು ಈ ಡಿಜಿಟಲ್ ಲೋಕದ ಕಾಳಜಿ–ಸಂಭ್ರಮದಲ್ಲಿ ಭಾಗಿಯಾಗುತ್ತವೆ.

ಮಕ್ಕಳು, ಯುವಜನ, ಪೋಷಕರು, ನೀತಿ ನಿರೂಪಕರು, ಶಿಕ್ಷಕರು, ಉದ್ಯಮಿಗಳು – ಹೀಗೆ ಸಮಾಜದ ಪ್ರಮುಖ ವಲಯಗಳಲ್ಲಿ ಜಾಗೃತಿ ಮೂಡಿಸುವ ಕೆಲಸವನ್ನು 'ಎಸ್‌ಐಡಿ' ಆಚರಣೆ ಮಾಡುತ್ತಿದೆ.